ಮಂತ್ರಿಗಳು ಈಗಾಗಲೇ ಅದನ್ನು ಉದ್ಘಾಟನೆ ಮಾಡಿ ಮೂರು ತಿಂಗಳು ಕಳೆದಿದೆ. ಆದರೆ ಅದು ಇನ್ನೂ ಕೂಡ ಡಾಂಬರೀಕರಣ ಆಗಿಲ್ಲ. ಏಪ್ರಿಲ್ ತಿಂಗಳೊಳಗಾಗಿ ಈ ಕಾಮಗಾರಿಯನ್ನು ಮುಗಿಸುತ್ತೀರಾ ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕೆಂದು ಕೋರುತ್ತೇನೆ. ಕಳೆದ ಅಧಿವೇಶನದಲ್ಲಿ ಹಿಂದಿದ್ದ ಲೋಕೋಪಯೋಗಿ ಸಚಿವರು ಮಾರ್ಚ್ 1999ರೊಳಗಾಗಿ ಈ ರಸ್ತೆಯ ಡಾಂಬರೀಕರಣ ಕಾರ್ಯ ಪೂರ್ತಿ ಮುಗಿಸುತ್ತೇವೆ ಎಂದು ಹೇಳಿದ್ದರು. ಮಾರ್ಚ್ 1999 ಇನ್ನೊಂದು ವಾರದೊಳಗಾಗಿ ಮುಗಿಯಲಿದ್ದು ಕಾಮಗಾರಿಗಳು ಅಷ್ಟರೊಳಗೆ ಮುಗಿಯುವ ಸಂಭವವಿಲ್ಲ. ಯಾವಾಗ ಈ ಕಾಮಗಾರಿಯನ್ನು ಶುರು ಮಾಡಲಿಕ್ಕೆ ತಾವು ಗುತ್ತಿಗೆದಾರರಿಗೆ ಸೂಚನೆ ಕೊಡುತ್ತೀರಿ ಮತ್ತು ಯಾವಾಗ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂಬ ಬಗ್ಗೆ ನನಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಉತ್ತರಿಸಬೇಕೆಂದು ಕೋರುತ್ತೇನೆ. ರಸ್ತೆ ಉದ್ಘಾಟನೆಯಾಗಿದ್ದರೂ ಕೂಡ ಈ ರೀತಿಯ ಪರಿಸ್ಥಿತಿ ಇದ್ದರೆ, ಇನ್ನು ಉದ್ಘಾಟನೆಯಾಗದ ರಸ್ತೆಗಳ ಪರಿಸ್ಥಿತಿ ಹೇಗೆ? ಎಂಬುದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಈ ಪುತ್ತೂರು ನಗರದ ಬೈಪಾಸ್ ರಸ್ತೆ 4.12 ಕಿ.ಮೀ.ನಷ್ಟು ಉದ್ದ ಇದೆ. ಈಗಾಗಲೇ ಇದರಲ್ಲಿ 3.30 ಕಿ.ಮೀ.ನಷ್ಟು ರಸ್ತೆಯನ್ನು ಗ್ರೇಡ್ 1 ಮತ್ತು ಗ್ರೇಡ್ 2 ಮೆಟ್ಲಿಂಗ್ ಮಾಡಿ ಮುಗಿಸಲಾಗಿದೆ. ಇನ್ನು ಉಳಿದಿರುವುದನ್ನು ಈಗಾಗಲೇ ಡಾಂಬರೀಕರಣ ಮಾಡಿ ಮುಗಿಸಿದ್ದೇವೆ. ಈ 3.30 ಕಿ.ಮೀ.ನಷ್ಟು ರಸ್ತೆಯೇನು ಕಾರ್ಪೆಟಿಂಗ್ ರಸ್ತೆ ಮಾಡಬೇಕಾಗಿದೆ ಅದಕ್ಕಾಗಿ ಈಗಾಗಲೇ 18.00 ಲಕ್ಷ ರೂ.ಗಳ ಮೊತ್ತದ ಅಂದಾಜು ಪಟ್ಟಿಯ ಟೆಂಡರ್‌ನ್ನೂ ಕೂಡ ಕರೆದಿದ್ದೇವೆ. ಮುಂಬರುವ ಜೂನ್ ತಿಂಗಳ ಅಂತ್ಯದೊಳಗಾಗಿ ಈ ಕಾಮಗಾರಿಯನ್ನು ಮುಗಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ತುಮಕೂರು ಶಿವಮೊಗ್ಗ ರಾಜ್ಯ ಹೆದ್ದಾರಿ ದುರಸ್ತಿ

132 (865) ಶ್ರೀ ಎಸ್.ಕುಮಾರ ಬಂಗಾರಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತುಮಕೂರು ಶಿವಮೊಗ್ಗ ರಾಜ್ಯ ಹೆದ್ದಾರಿ ವಾಹನ ಸಂಚಾರಕ್ಕೆ ಯೋಗ್ಯ ವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಹೆದ್ದಾರಿಯನ್ನು ದುರಸ್ತಿಗೊಳಿಸಲು ತೆಗೆದುಕೊಂಡ ಕ್ರಮಗಳೇನು

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಹೆದ್ದಾರಿಯು ಹಲವೆಡೆ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅತೀ ಜರೂರು ದುರಸ್ತಿ ಹಾಗೂ ಗುಂಡಿಗಳನ್ನುಮುಚ್ಚಿ ರಸ್ತೆ ಮೇಲ್ಮೈಯನ್ನು ಸರಿಪಡಿಸಿ, ವಾಹನಗಳ ಸಂಚಾರಕ್ಕೆ ಯೋಗ್ಯವನ್ನಾಗಿಡಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಕೇಂದ್ರ ಸರ್ಕಾರ 2:99ರಲ್ಲಿ ಘೋಷಿಸಿದೆ. ಇನ್ನು ಮುಂದೆ ನಿರ್ವಹಣೆಯನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ಮಾಡಲಾಗುವುದು.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ತುಮಕೂರು -ಶಿವಮೊಗ್ಗ ರಾಜ್ಯ ಹೆದ್ದಾರಿಯನ್ನು ಈಗ ರಾಷ್ಟ್ರೀಯ ಹೆದ್ದಾರಿಯಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ರಸ್ತೆಯಲ್ಲಿ ಜರೂರು ದುರಸ್ತಿ ಹಾಗೂ ಗುಂಡಿಗಳನ್ನು ಮುಚ್ಚಿ ರಸ್ತೆ ಮೇಲ್ಮೈಯನ್ನು ಸರಿಪಡಿಸಿ ಸಂಚಾರ ಯೋಗ್ಯವನ್ನಾಗಿ ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಇದು ರಾಷ್ಟ್ರೀಯ ಹೆದ್ದಾರಿ ಎಂದಾಕ್ಷಣ ಇಲ್ಲಿ ಎಷ್ಟರಮಟ್ಟಿಗೆ ವಾಹನಗಳ ಸಂಚಾರದ ಒತ್ತಡ ಇರುತ್ತದೆ ಎಂಬುದನ್ನು ತಾವೇ ಊಹಿಸಬಹುದು. ಈ ರಸ್ತೆ ತಿಪಟೂರಿನಿಂದ ತುಮಕೂರಿನವರೆಗೆ ಸಿಕ್ಕಾಪಟ್ಟೆ ಹಾಳಾಗಿ ಹೋಗಿದೆ. ಹೆದ್ದಾರಿಯನ್ನು ದುರಸ್ತಿಗೊಳಿಸಲು ಸರ್ಕಾರದ ಎಷ್ಟು ಹಣ ಖರ್ಚು ಮಾಡಿದೆ ? ಏನು ಮಾಡಿದೆ ಎಂಬುದನ್ನು ಹೇಳುತ್ತಿಲ್ಲ. ಕೇವಲ ಗುಂಡಿ ಮುಚ್ಚಲಾಗಿದೆ. ಎಂದಷ್ಟೇ ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿ ಯಾವ ತರಹದ ಕೆಲಸಗಳನ್ನು ಮಾಡಿ ರಸ್ತೆಯನ್ನು ದುರಸ್ತಿಗೊಳಿಸಲಾಗುತ್ತಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾಗಿ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೇ, ಈ ತುಮಕೂರು-ಶಿವಮೊಗ್ಗ ಹೆದ್ದಾರಿಯು ರಾಷ್ಟ್ರೀಯ ಹೆದ್ದಾರಿಯಾಗಿ ಫೆಬ್ರವರಿ 99ರಲ್ಲಿ ಪರಿವರ್ತನೆಗೊಂಡಿದೆ. ಈ ಹೆದ್ದಾರಿಯ ಉದ್ದ 363 ಕಿ.ಮೀ. ಆಗಿದೆ. ಈ ಹೆದ್ದಾರಿಯಲ್ಲಿನ ಗುಂಡಿಗಳನ್ನು ಮುಚ್ಚುವಂತಹ ಕಾರ್ಯವನ್ನು ನಾವು ಮುಗಿಸಿದ್ದೇವೆ. ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಹೊಸದಾಗಿ ಅನುದಾನ ಬರಬೇಕಾಗಿದೆ. ಈಗಾಗಲೇ ನಾವು ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಣೆಯಾದ ನಂತರ ಇದರ ದುರಸ್ತಿ ಬಗ್ಗೆ ಪೂರ್ತಿಯಾದಂತಹ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಲು ಮನವಿಯನ್ನು ಸಲ್ಲಿಸಿದ್ದೇವೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ತಕ್ಷಣ, ಇದನ್ನು ಹಂತ ಹಂತವಾಗಿ 2-3 ವರ್ಷಗಳಲ್ಲಿ ಇದರ ದುರಸ್ತಿ ಮುಗಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ರಸ್ತೆ ದುಸ್ಥಿತಿ ಬಗ್ಗೆ ಸರ್ಕಾರ ಸರಿಯಾಗಿ ಹೇಳುತ್ತಿಲ್ಲ. ಆ ರಸ್ತೆಯಲ್ಲಿ ಓಡಾಡುವುದಕ್ಕಾಗುವುದಿಲ್ಲ. ಅಲ್ಲಿ ಓಡಾಡುವುದರಿಂದ ನಮ್ಮ ಬೇರಿಂಗ್‌ಗಳೇ ಹೋಗಿರುವಂತಹ ನಿದರ್ಶನಗಳು ಇವೆ. ಕಾರಿನ ಬೇರಿಂಗ್‌ಗಳು ಹೋಗುವ ನಿದರ್ಶನಕ್ಕಿಂತ ನಮ್ಮ ಬೇರಿಂಗ್‌ಗಳು ಹೋಗಿರುವುದೇ ಹೆಚ್ಚಾಗಿದೆ.

ಶ್ರೀ ಎನ್. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಪಕ್ಕದಲ್ಲಿರುವ ಮರಗಳು ಅರಣ್ಯ ಇಲಾಖೆಗೆ ಸೇರಿರುತ್ತವೆ. ರಸ್ತೆಯ ಪಕ್ಕದಲ್ಲಿರುವ ಯಾವುದಾದರೂ ಒಂದು ಮರ ಬಿದ್ದರೆ ಅದು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅಲ್ಲೇ ಬಿದ್ದಿರುತ್ತದೆ. ಮರವನ್ನು ಯಾರು ರಸ್ತೆಯಿಂದ ತೆಗೆಯಬೇಕು ಎಂಬುದು ಇಲ್ಲಿರುವ ಪ್ರಶ್ನೆಯಾಗಿದೆ. ನಿನ್ನೆ ನಾನು ದಾವಣಗೆರೆಯಿಂದ ಬೆಂಗಳೂರಿಗೆ ಬರುವಾಗ ಹೊಳಲ್ಕೆರೆ-ಹೊಸದುರ್ಗ ರಸ್ತೆಯಲ್ಲಿ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದು ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಬೆಳಿಗ್ಗೆ ನಾನು ಹೋಗುವಾಗ ಆ ಮರ ಹಾಗೆಯೇ ಇತ್ತು, ಮತ್ತೆ ಸಂಜೆ ನಾನು ಹಿಂದಿರುಗಿ ಬರುವಾಗಲೂ ಕೂಡ ಆ ಮರ ಹಾಗೆಯೇ ಇತ್ತು ಮಾನ್ಯ ಲೋಕೋಪಯೋಗಿ ಅಥವಾ ಅರಣ್ಯ ಸಚಿವರಾಗಲೀ ಬೇಗನೆ ಆ ಮರಗಳನ್ನು ತೆಗೆಸುವಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರ ಸಮಸ್ಯೆ ಬಗ್ಗೆ ಗಮನಹರಿಸಿ. ಮಾನ್ಯ ಕುಮಾರ್ ಬಂಗಾರಪ್ಪನವರೇ, ಮತ್ತೇನಾದರೂ ಪ್ರಶ್ನೆ ಕೇಳುವುದಿದ್ದರೆ ಕೇಳಿ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲೇ ಇಲ್ಲ. ರಸ್ತೆ ದುರಸ್ತಿಗೊಳಿಸುವ ಬಗ್ಗೆ ಏನು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ? ಈಗ ಅದರ ದುರಸ್ತಿಗಾಗಿ ಯಾವ ತರಹ ಖರ್ಚು ಮಾಡಿದ್ದಾರೆ ? ಎಂಬ ವಿವರಗಳೇನೂ ನನಗೆ ಗೊತ್ತಾಗಲಿಲ್ಲ. ನಾನು ಕೇಳಿರುವ ಪ್ರಶ್ನೆಯೇ ಬೇರೆ, ಮಾನ್ಯ ಮಂತ್ರಿಗಳು ಕೊಟ್ಟ ಉತ್ತರವೇ ಬೇರೆ. ಆ ಹೆದ್ದಾರಿಯಲ್ಲಿ ರಸ್ತೆ ಎಂಬುದೇ ಇಲ್ಲ. ನಾವು ಯಾರೂ ಕೂಡ ಆ ರಸ್ತೆಯನ್ನು ಬಳಸುವುದಿಲ್ಲ. ನಾವು ಚನ್ನರಾಯಪಟ್ಟಣಕ್ಕೆ ಹೋಗಿ ಅಲ್ಲಿಂದ ಅರಸೀಕೆರೆಗೆ ಹೋಗಿ ಓಡಾಡುತ್ತಿದ್ದೇವೆ. ಕೇವಲ ನಾವು ಮಾತ್ರವಲ್ಲ, ಬಹಳಷ್ಟು ಜನ ಕಾರುಗಳಲ್ಲಿ ಪ್ರಯಾಣಿಸುವವರು ಆ ರಸ್ತೆಯಲ್ಲಿ ಯಾರೂ ಹೋಗುತ್ತಿಲ್ಲ. ಮಾನ್ಯ ಮಂತ್ರಿಗಳು ಜರೂರಾಗಿ ಆ ರಸ್ತೆ ದುರಸ್ತಿ ಮಾಡಿಸಬೇಕು. ತುಮಕೂರಿನಿಂದ ತಿಪಟೂರಿನವರೆಗಂತೂ ಯಾವುದೇ ಕಾರಣಕ್ಕಾಗಿಯೂ ಆ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿ ಅದು ಇಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ ನಾವೂ ಕೂಡ ಆ ರಸ್ತೆಯಲ್ಲಿ ಓಡಾಡುವವರೇ ಆಗಿದ್ದೇವೆ. ತಿಪಟೂರು ಮತ್ತು ತುಮಕೂರು ಊರಿನೊಳಗೆ ಹೋಗಬೇಕಾದರೆ ಒಂದೊಂದು ಗಂಟೆ ನಾವು ಮೂವ್ ಆಗಬೇಕಾಗುತ್ತದೆ. ಬಹಳ ವರ್ಷಗಳಿಂದ ಇದು ಅದೇ ಸ್ಥಿತಿಯಲ್ಲಿದೆ. ಸರ್ಕಾರ ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಬೇರೆ ಮಂತ್ರಿಗಳಾಗಲೀ ರಸ್ತೆಯ ಮೂಲಕವೇ ಪ್ರಯಾಣಿಸುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ರಸ್ತೆಯ ಮೂಲಕ ಓಡಾಡುತ್ತಿದ್ದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಓಡಾಡುತ್ತಾರೆ ಎಂಬ ಹೆದರಿಯಿಂದಲಾದರೂ ಸಹ ಅವರ ಕಾರು ಹೋಗುವಂತೆ ರಸ್ತೆಗಳನ್ನು ರಿಪೇರಿ ಮಾಡುತ್ತಾರೆ. ಇನ್ನು ಮುಂದೆ ಮಾನ್ಯ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ಅನ್ನು ಬಿಟ್ಟು ಪ್ರತಿ ಜಿಲ್ಲೆಯಲ್ಲೂ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ರಸ್ತೆಯ ಮೂಲಕವೇ ಓಡಾಡುವಂತಹ ಪ್ರಯತ್ನವನ್ನು ಮಾಡುತ್ತಾರೆಯೇ ಎಂದು ನಾನು ಅವರನ್ನು ಕೇಳಬಯಸುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾವು ಜಿಲ್ಲೆಯೊಳಗೆ ಹೆಲಿಕಾಪ್ಟರ್ ಉಪಯೋಗ ಮಾಡುವುದಿಲ್ಲ. ಹೆಡ್ ಕ್ವಾರ್ಟರ್ಸ್‌ನಿಂದ ಜಿಲ್ಲೆಗೆ ಅಥವಾ ಬೇರೆ ಯಾವುದಾದರೂ ಬಹಳ ದೊಡ್ಡ ಪಟ್ಟಣಕ್ಕೆ ಹೋಗುವುದಾದರೆ ಮಾತ್ರ ಹೆಲಿಕಾಪ್ಟರ್ ಉಪಯೋಗಿಸಲಾಗುತ್ತದೆ. ರಸ್ತೆಗಳು ಕೇವಲ ನಮ್ಮ ಕಾಲದಲ್ಲಿ ಮಾತ್ರ ಗುಂಡಿ ಬಿದ್ದಿವೆ. ಎಂದೇನಿಲ್ಲ. ಹಿಂದೆ ಮುಖ್ಯಮಂತ್ರಿಗಳ ಸೈಕಲ್ ಮೇಲೆ ಹೋದವರೂ ಕೂಡ ಇದ್ದಾರೆ, ನಡೆದುಕೊಂಡು ಹೋದವರೂ ಕೂಡ ಇದ್ದಾರೆ. ಅವರು ಮಂತ್ರಿಗಳಾಗಿದ್ದಾಗ ಹೇಗೆ ಓಡಾಡುತ್ತಿದ್ದರೋ ನನಗಂತೂ ಗೊತ್ತಿಲ್ಲ. ಆದುದರಿಂದ ಆದಷ್ಟು ಸಮಯ ಉಳಿಸುವುದಕ್ಕೆ, ಸರ್ಕಾರದ ಹಣ ಉಳಿಸುವುದಕ್ಕೆ, ಜನರಿಗೆ ಆದಷ್ಟು ಬೇಗ ಸವಲತ್ತುಗಳನ್ನು ತಲುಪಿಸುವುದಕ್ಕೆ ಏನೇನು ಉಪಯೋಗಿಸಬೇಕೋ ಅದನ್ನೆಲ್ಲಾ ನಾವು ಉಪಯೋಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನದೊಂದು ಸಲಹೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಮೇಲೆಯೇ ಓಡಾಡಲಿ, ಅವರು ಕೆಳಗೆ ರಸ್ತೆಗಳ ಮೂಲಕ ಓಡಾಡಲು ಶುರು ಮಾಡಿದರೆ ಅವರ ಸೊಂಟ ಮುರಿದು ಹೋಗುತ್ತದೆ. ಆದ್ದರಿಂದ ಅವರು ದಯವಿಟ್ಟು ರಸ್ತೆಗಳ ಮೂಲಕ ಓಡಾಡುವುದು ಬೇಡ. ಕರ್ನಾಟಕ ರಾಜ್ಯದ ಎಲ್ಲಾ ರಸ್ತೆಗಳೂ ಕೂಡ ಹದಗೆಟ್ಟು ಹೋಗಿವೆ. ರಾಜ್ಯದ ಯಾವುದೇ ಮೂಲೆಗೆ ಹೋದರೂ ಕೂಡ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಜನರ ಗೋರಿಗಳಾಗಿ ಬಿಟ್ಟಿವೆ, ರಸ್ತೆಗಳು ಹದಗೆಟ್ಟಿರುವ ಬಗ್ಗೆಯೇ ನಾವು ಇವತ್ತು ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟೊಂದು ಪ್ರಶ್ನೆಗಳನ್ನು ಕೇಳಿದೆವು ಎಂಬುದು ತಮಗೆ ಗೊತ್ತಿದೆ. ರಸ್ತೆಗಳು ಹದಗೆಡಲು ಕಾರಣವೇನು ಎಂಬುದರ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ಚಿಂತನೆ ಮಾಡಲಿಲ್ಲವೆಂದರೆ ಅದು ಅತ್ಯಂತ ಶೋಚನಿಯವಾದ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಅ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರುತಿನ ಪ್ರಶ್ನೆಗಳ 7ನೇ ಪಟ್ಟಿಯಲ್ಲಿನ 15 ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳ ಉತ್ತರಗಳನ್ನು ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 7ನೇ ಪಟ್ಟಿಯಲ್ಲಿನ 66 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 8ನೇ ಪಟ್ಟಿಯಲ್ಲಿರುವ 117 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರಗಳನ್ನು ಹಾಗೂ 9ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 106 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಮೊತ್ತ

534 (889) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) 31.03.1998ರವರೆಗೆ ಲೋಕೋಪಯೋಗಿ ಇಲಾಖೆಯು ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಹಣ ಎಷ್ಟು ?

(ಆ) ಬಾಕಿ ಹಣದ ಪಾವತಿಗಾಗಿ ಗುತ್ತಿಗೆದಾರರು ಕೆಲವು ಲೋಕೋಪಯೋಗಿ ಕಛೇರಿಗಳಿಗೆ ಮುತ್ತಿಗೆ ಹಾಕಿದ್ದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ, ಈ ಬಾಕಿ ಹಣವನ್ನು ಎಂದು ಪಾವತಿ ಮಾಡಲಾಗುವುದು ?

ಶ್ರೀ ಉಮೇಶ್ ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) 31.03.1998ರವರೆಗೆಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಗೆ ನೀಡಬೇಕಾದ ಮೊತ್ತ 11371.12 ಲಕ್ಷ ರೂ.ಗಳು.